....

127 (133): ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಕೆಂಪೇಗೌಡ ಬಸ್‌ನಿಲ್ದಾಣದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು;

ಆ) ಇದರ ಅಂದಾಜು ವೆಚ್ಚವೆಷ್ಟು;

ಇ) ಈ ಕಾಮಗಾರಿಗಳ ಇತ್ತೀಚಿನ ಪ್ರಗತಿಯ ವಿವರಗಳನ್ನು ನೀಡುವುದು;

ಈ) ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ನಗರ ಕೇಂಪೇಗೌಡ ಬಸ್‌ನಿಲ್ದಾಣದ ಮುಖ್ಯ ಕಟ್ಟಡದ ಮೇಲೆ ಎರಡು ಅಂತಸ್ತುಗಳನ್ನು ನಿರ್ಮಿಸಿ ಹೆಚ್ಚಿನ ಪಾಸ್ ಕೌಂಟರ್‌ಗಳಿಗೆ ಸ್ಥಳ ಒದಗಿಸುವುದು ಮತ್ತು ಜಿ.ಪಿ.ಎಸ್ ಮತ್ತು ಜಿ.ಐ.ಎಸ್. ಕಛೇರಿಗಳಿಗೆ ಕಂಟ್ರೋಲ್ ರೂಂಗಳನ್ನು ಒದಗಿಸುವುದು.

ಆ) ಕೆಂಪೇಗೌಡ ಬಸ್‌ನಿಲ್ದಾಣದ ಪ್ರಯಾಣಿಕರ ತಂಗುದಾಣಗಳನ್ನು (ಷೆಲ್ಟರ್‌ಗಳನ್ನು) ದುರಸ್ತಿಗೊಳಿಸುವುದು ಮತ್ತು ಅಭಿವೃದ್ಧಿಗೊಳಿಸುವುದು ಹಾಗೂ ಬಸ್‌ಬೇಗಳಿಗೆ ಕಾಂಕ್ರೀಟ್ ಅಳವಡಿಸುವುದು.

ಇ) ಮೂರು ನಿರ್ಮಲ ಮಾದರಿಯ ಶೌಚಾಲಯಗಳನ್ನು ನಿರ್ಮಿಸುವುದು.

ಆ) ಕಾಮಗಾರಿ ಕೆಲಸದ ಒಟ್ಟು ಅಂದಾಜು ವೆಚ್ಚ ರೂ. 450.00 ಲಕ್ಷಗಳು.

ಇ) ಅ. ಬಸ್‌ನಿಲ್ದಾಣದ ಮುಖ್ಯ ಕಟ್ಟಡದ ಮೇಲೆ ಎರಡು ಅಂತಸ್ತುಗಳನ್ನು ನಿರ್ಮಿಸುವ ಕೆಲಸವು ಪೂರ್ಣಗೊಂಡಿದ್ದು, ಕಾಮಗಾರಿಯು ಮುಗಿಯುವ ಹಂತದಲ್ಲಿರುತ್ತದೆ.

ಆ) ಬಸ್‌ಬೇಗಳ ಮೊದಲನೇ ಮತ್ತು 2ನೇ ರಿಂಗ್‌ಗಳಿಗೆ ಕಾಂಕ್ರೀಟಿಂಗ್ ಅಳವಡಿಸುವ ಕೆಲಸವು ಪೂರ್ಣಗೊಂಡಿರುತ್ತದೆ. ಉಳಿದ 3ನೇ ಮತ್ತು 4ನೇ ರಿಂಗ್‌ಗಳಿಗೆ ಕಾಂಕ್ರೀಟ್ ಅಳವಡಿಸುವ ಕೆಲಸವು ಪ್ರಗತಿಯಲ್ಲಿರುತ್ತದೆ.

ಇ) ಒಂದು ನಿರ್ಮಲ ಮಾದರಿಯ ಶೌಚಾಲಯವು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಉಳಿದ ಇನ್ನೆರಡು ಶೌಚಾಲಯಗಳನ್ನು ನಿರ್ಮಿಸುವ ಕೆಲಸವನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಈ) ನವೆಂಬರ್ – 2004ರಲ್ಲಿ ಪೂರ್ಣಗೊಳಿಸಲಾಗುವುದು.

....

128 (187): ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಚಾರ ಸೌಲಭ್ಯಕ್ಕೆ ಇರುವ ವಾಹನಗಳಿಗೆ ಏಕರೂಪದ ಬಣ್ಣವನ್ನು ಹೊಂದುವ ನಿಯಮಗಳು ಜಾರಿಯಲ್ಲಿವೆಯೇ;